# ಎಸ್ಮಾ ಕಾಯಿದೆ ಜಾರಿ ಬರೀ ಗುಮ್ಮ!

## 8 ವರ್ಷಗಳ ಹಿಂದೆ ಅಂಗೀಕರಿಸಿದ ಕಾಯಿದೆ ಒಮ್ಮೆ ಮಾತ್ರ ಜಾರಿ

■ **ಶ್ರೀಕಾಂತ್ ಹುಣಸವಾಡಿ**, ಬೆಂಗಳೂರು
Srikanth.G@timesgroup.com

ಜನರ ನಿತ್ಯ ಬದುಕಿಗೆ ತೊಂದರೆ ಉಂಟು ಮಾಡುವ ಕಾನೂನುಬಾಹಿರ ಮುಷ್ಕರ ಪ್ರತಿಭಟನೆಗಳನ್ನು ಹತ್ತಿಕ್ಕುವುದಕ್ಕಾಗಿ ರಾಜ್ಯ ಸರಕಾರ 8 ವರ್ಷಗಳ ಹಿಂದೆಯೇ ಅಂಗೀಕರಿಸಿದ ಎಸ್ಮಾ ಕಾಯಿದೆ ಇನ್ನೂ ಕಾಗದದಲ್ಲಿಯೇ ಉಳಿದಿದೆ.

ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ಅಧಿನಿಯಮ, 2013 ಅನ್ನು ಸರಕಾರ 2013ರಲ್ಲಿ ಜಾರಿಗೊಳಿಸಿದೆ. ಆರಂಭದಲ್ಲಿ ಇದರಲ್ಲಿ ಈಗ ಜ್ವಲಂತವಾಗಿರುವ ಸಾರಿಗೆ ನೌಕರರ ಪ್ರತಿಭಟನೆಯ ಉಲ್ಲೇಖವಿರಲಿಲ್ಲ. 2015ರಲ್ಲಿ ಸೆಕ್ಷನ್ 2ರ ವ್ಯಾಖ್ಯಾನ ನಿಯಮ 1(ಎ) (3)ಕ್ಕೆ ತಿದ್ದುಪಡಿ ತಂದು ಸರಕು ಮತ್ತು ಪ್ರಯಾಣಿಕರನ್ನು ಹೊತ್ತೊಯ್ಯುವ ಸಾರಿಗೆ ಸೇವೆಯನ್ನೂ ಸಹ ಸೇರ್ಪಡೆ ಮಾಡಲಾಯಿತು.

ಆದರೆ, ಜಾರಿಗೊಳಿಸಿರುವುದು ಒಮ್ಮೆ ಮಾತ್ರ. 2016ರಲ್ಲಿ ಪೊಲೀಸರ ವೇತನ ತಾರತಮ್ಯ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಪ್ರತಿಭಟನೆಗೆ ಕರೆ ನೀಡಿದ್ದ ಅಖಿಲ ಕರ್ನಾಟಕ ಪೊಲೀಸ್ ಮಹಾಸಂಘದ ಅಧ್ಯಕ್ಷ ವಿ. ಶಶಿಧರ್ ವಿರುದ್ಧ ಎಸ್ಮಾ ಕಾಯಿದೆಯ ಸೆಕ್ಷನ್ 5ರ ಅಡಿ ಪ್ರತಿಭಟನೆಗೆ ಪ್ರಚೋದನೆ ನೀಡಲಾಗುತ್ತಿದೆ ಎಂದು ಪ್ರಕರಣ ದಾಖಲಿಸಿ ಆನಂತರ ಬಂಧಿಸಲಾಗಿತ್ತು. ಆ ಪ್ರಕರಣದ ವಿಚಾರಣೆ ಇನ್ನೂ ನ್ಯಾಯಾಲಯದಲ್ಲಿ ಪ್ರಗತಿಯಲ್ಲಿದೆ.

**ಬರೀ ಗುಮ್ಮ:** ಹಿಂದೆ ವೈದ್ಯರು, ಪೊಲೀಸರು, ಮೆಟ್ರೊ ಸಿಬ್ಬಂದಿ ಹಾಗೂ ಸಾರಿಗೆ ನೌಕರರು ಕಳೆದ ಡಿಸೆಂಬರ್‌ನಲ್ಲಿ ಮುಷ್ಕರ ನಡೆಸಿದ್ದಾಗಲೂ ಸಹ ಸರಕಾರ ಸುಮ್ಮನೆ 'ಎಸ್ಮಾ'ವನ್ನು ಗುಮ್ಮ ಬಂತು ಗುಮ್ಮ ಎನ್ನುವಂತೆ ತೋರಿಸಿ ಸುಮ್ಮನಾಯಿತು.

ಈಗಲೂ ಅಷ್ಟೇ ಪ್ರತಿಭಟನೆ ನಾಲ್ಕನೇ ದಿನಕ್ಕೆ ಕಾಲಿಟ್ಟಿಡುತ್ತಿದ್ದರೂ ಸಹ, ಸರಕಾರ ಮೊದಲ ಮಾತ್ರ ಎಸ್ಮಾ ಎಂದು ಎಚ್ಚರಿಕೆ ನೀಡಿದ್ದಷ್ಟೇ ಹೊರತು ಆ ನಿಟ್ಟಿನಲ್ಲಿ ಕಿಂಚಿತ್ತೂ ಮುಂದುವರಿದಿಲ್ಲ. ಹಾಗಾಗಿ ಎಸ್ಮಾ ಕೇವಲ ಪೇಪರ್ ಟೈಗರ್ ಆಗಿ ಸರಕಾರ ನೋಡುತ್ತಿದೆ. ಸರಕಾರವೇ ಕೈಯಲ್ಲಿರುವ ಅಧಿಕಾರ ಬಳಸಲು ಹಿಂದೇಟು ಹಾಕಿದರೆ ಮುಷ್ಕರ ನಿರತರು ಅದನ್ನೇ ಅಸಹಾಯಕತೆಯಾಗಿ ಬಳಸಿಕೊಳ್ಳುತ್ತಾರೆ ಎನ್ನುತ್ತಾರೆ ಕಾನೂನು ತಜ್ಞರು.

ಆದರೆ ಮಾನವೀಯ ನೆಲೆಯಲ್ಲಿ 1.40 ಲಕ್ಷ ನೌಕರರು ಸಿಬ್ಬಂದಿಯನ್ನು ಗಮನದಲ್ಲಿರಿಸಿಕೊಂಡು ಸರಕಾರ ಎಸ್ಮಾ ಜಾರಿಗೆ ಸ್ವಲ್ಪ ವಿಳಂಬ ಮಾಡುತ್ತಿದೆ ಎನ್ನುವುದು ಸರಕಾರಿ ಅಧಿಕಾರಿಗಳ ಅನಿಸಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಎಸ್ಮಾ ಕಾಯಿದೆಯ ಒಳ-ಹೊರಗನ್ನು ಇಲ್ಲಿ ಕಟ್ಟಿಕೊಡಲಾಗುತ್ತಿದೆ.

● **ಎಸ್ಮಾ ಕೇವಲ ಪೇಪರ್ ಟೈಗರ್ ಆಗಿದೆ, ಸರಕಾರ ಎಲ್ಲ ಅಧಿಕಾರ ವಿದ್ದರೂ ಸಹ ಅದನ್ನು ಬಳಕೆ ಮಾಡುತ್ತಿಲ್ಲ. ಹಾಗಾಗಿ ಸಾರಿಗೆ ನೌಕರರ ಪ್ರತಿಭಟನೆಯನ್ನು ಹತ್ತಿಕ್ಕಲಾಗದೆ ಸರಕಾರ, ಸಾರ್ವಜನಿಕರಿಗೆ ಅನಗತ್ಯ ತೊಂದರೆ ಮಾಡುತ್ತಿದೆ.**

**- ಜಿ.ಆರ್.ಮೋಹನ್,**
ಹೈಕೋರ್ಟ್ ವಕೀಲರು.

### ಯಾವ ಸೆಕ್ಷನ್ ಏನು ಹೇಳುತ್ತದೆ?

ಕಾಯಿದೆಯಲ್ಲಿ ಒಟ್ಟು 9 ಸೆಕ್ಷನ್‌ಗಳಿದ್ದು, ಇದರಲ್ಲಿ ಸೆಕ್ಷನ್ 1ರ ಪ್ರಕಾರ ಈ ಅಧಿನಿಯಮ 10 ವರ್ಷಗಳ ಕಾಲ ಜಾರಿಯಲ್ಲಿರುತ್ತದೆ. ಮತ್ತು ಇಡೀ ರಾಜ್ಯಕ್ಕೆ ಅನ್ವಯವಾಗುತ್ತದೆ. ಸೆಕ್ಷನ್ 2ರ ಪ್ರಕಾರ ಅತ್ಯಾವಶ್ಯಕ ಸೇವೆ ಎಂದರೆ ನೀರು, ವಿದ್ಯುತ್ ಉತ್ಪಾದನೆ, ತಯಾರಿಕೆ, ಸಂಗ್ರಹಣೆ, ಸಾಗಾಟ, ಸಾರ್ವಜನಿಕರನ್ನು ಹಾಗೂ ಸರಕುಗಳನ್ನು ಸಾಗಾಣೆ ಮಾಡುವ ಸಾರಿಗೆ ವ್ಯವಸ್ಥೆ ಬರಲಿದೆ. ಸೆಕ್ಷನ್ 3ರ ಪ್ರಕಾರ ಅತ್ಯಾವಶ್ಯಕ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳು ಮುಷ್ಕರ ನಡೆಸದಂತೆ ಸರಕಾರ ಆದೇಶ ಹೊರಡಿಸಬಹುದು. ಒಮ್ಮೆ ಆದೇಶ ಹೊರಡಿಸಿದರೆ ಆ ಆದೇಶ 1 ವರ್ಷ ಊರ್ಜಿತವಾಗಿರುತ್ತದೆ. ಆ ಅವಧಿಯಲ್ಲಿ ಯಾವುದೇ ನೌಕರ ಅಥವಾ ಸಂಘಟನೆ ಮುಷ್ಕರ ನಡೆಸುವುದು ಕಾನೂನುಬಾಹಿರ.

- **ಸೆಕ್ಷನ್ 4:** ನೌಕರ ಅಥವಾ ಸಂಘಟನೆ ಕಾನೂನುಬಾಹಿರ ಮುಷ್ಕರ ನಡೆಸಿದರೆ ಅದು ಅಪರಾಧ, 1 ವರ್ಷ ಶಿಕ್ಷೆ ಹಾಗೂ 5 ಸಾವಿರ ದಂಡ ವಿಧಿಸಲು ಅವಕಾಶ.
- **ಸೆಕ್ಷನ್ 5:** ಕಾನೂನುಬಾಹಿರ ಮುಷ್ಕರಕ್ಕೆ ಪ್ರೇರಣೆ ಅಥವಾ ಪ್ರಚೋದನೆ ನೀಡುವುದೂ ಸಹ ಅಪರಾಧ, 1 ವರ್ಷ ಶಿಕ್ಷೆ, 5 ಸಾವಿರ ದಂಡ ವಿಧಿಸಬಹುದು.
- **ಸೆಕ್ಷನ್ 6:** ಮುಷ್ಕರಕ್ಕೆ ಹಣಕಾಸಿನ ನೆರವು ನೀಡುವುದೂ ಅಪರಾಧವಾಗಿದ್ದು ಅದಕ್ಕೂ 1 ವರ್ಷದವರೆಗೆ ಶಿಕ್ಷೆ ಹಾಗೂ 5 ಸಾವಿರ ದಂಡ ವಿಧಿಸಬಹುದು.
- **ಸೆಕ್ಷನ್ 7:** ಮುಷ್ಕರ ನಿರತ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಬಹುದು.
- **ಸೆಕ್ಷನ್ 8:** ಪೊಲೀಸರಿಗೆ ಕೋರ್ಟ್‌ನ ವಾರೆಂಟ್ ಇಲ್ಲದೆಯೂ ಮುಷ್ಕರದಲ್ಲಿ ತೊಡಗಿದವರನ್ನು ಬಂಧಿಸುವ ಅಧಿಕಾರವಿದೆ.
- **ಸೆಕ್ಷನ್ 9:** ಈ ಕಾಯಿದೆಗೆ ಇನ್ನಷ್ಟು ಬಲ ತುಂಬಿದ್ದು, ಇತರೆ ಕಾಯ್ದೆಗಳಲ್ಲಿರುವ ಸೆಕ್ಷನ್‌ಗಳನ್ನು ಮೀರಿ ಈ ಕಾಯಿದೆ ನಿಲ್ಲುತ್ತದೆ
- ಈ ಕಾಯಿದೆಯಡಿಯ ಎಲ್ಲಾ ಅಪರಾಧಗಳೂ ಜಾಮೀನು ರಹಿತ ಅಪರಾಧಗಳಾಗಿದ್ದು, ತಕ್ಷಣ ಜಾಮೀನು ಸಿಗುವುದೂ ಕಷ್ಟ

### ಪರಿಹಾರ ಕೋರಿ ದಾವೆ

ಈ ಮಧ್ಯೆ, ಕಳೆದ ಡಿಸೆಂಬರ್‌ನಲ್ಲಿ ನಾಲ್ಕು ದಿನ ಮುಷ್ಕರ ನಡೆಸಿದ್ದಕ್ಕಾಗಿ ಸ್ವತಃ ಕೆಎಸ್ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರ ಸಂಘಟನೆಗಳ ವಿರುದ್ಧ 4 ಕೋಟಿ ರೂ. ನಷ್ಟ ಭರಿಸಿಕೊಡಬೇಕೆಂದು ದಾವೆಯನ್ನು ಹೂಡಿವೆ.